# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಕ್ರಿಮಿನಲ್ ಮಿಸ್. ನಂ. 51/2022

| | | |
|---|---|---|
| ಹೆಸರು | – | ನವೀನ್ ಕುಮಾರ್ |
| ತಂದೆಯ ಹೆಸರು | – | ಗಣಪತಿ |
| ವಯಸ್ಸು | – | **42** ವರ್ಷ |
| ವೃತ್ತಿ | – | ಖಾಸಗಿ ಕೆಲಸ |
| ವಾಸಸ್ಥಳ | – | ಅರಕೇತನ ಹಳ್ಳಿ, ಬೆಂಗಳೂರು. |

(ದಿನಾಂಕಃ **08.10.2024** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಮುಖ್ಯ ವಿಚಾರಣೆ ಃ ಎದುರುದಾರರ ಪರ ವಕೀಲರಾದ ಶ್ರೀ ಜಿ.ಕೆ ರವರಿಂದಃ

1. ನಾನು ನನ್ನ ತಾಯಿ ಮತ್ತು ನನ್ನ ಸಹೋದರ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇವೆ.

2. 2015 ನೇ ಸಾಲಿನಲ್ಲಿ ಅರ್ಜಿದಾರರ ತಂದೆ ತಾಯಿಗಳು ಅರ್ಜಿದಾರಳನ್ನು ವಿವಾಹ ಮಾಡಿಕೊಳ್ಳುವಂತೆ ನಮ್ಮನ್ನು ಬೇಟಿ ಮಾಡಿರುತ್ತಾರೆ.

3. ನಾವು ನನ್ನ ಹೆಂಡತಿಯ ತಂದೆ ತಾಯಿ ಸ್ವಲ್ಪ ಸಮಯಾವಕಾಶ ಕೇಳಿದ್ದು ಆದರೆ ಅವರು ಒತ್ತಾಯ ಮಾಡಿದ್ದ ನಂತರ ನಾನು ಅರ್ಜಿದಾರಳನ್ನು ಸ್ವ ಇಚೆಚಯಿಂದ ವಿವಾಹ ಮಾಡಿಕೊಂಡಿರುತ್ತೇನೆ.

4. ಅರ್ಜಿದಾರಳು ನನ್ನನ್ನು ವಿವಾಹ ಮಾಡಿಕೊಂಡು ಮನೆಗೆ ಬಂದ ನಂತರ ಮನೆಯಲ್ಲಿ ಕೆಲಸ ಮಾಡದೇ ನನ್ನ ತಾಯಿಗೆ ಯಾವುದೇ ಸಹಾಯ ಮಾಡದೇ ಸುಮ್ಮನೇ ಇರುತ್ತಿದ್ದರು.

5. ಅರ್ಜಿದಾರಳು ನನ್ನ ಮತ್ತು ನನ್ನ ತಾಯಿಯ ಮಧ್ಯ ಜಗಳ ಉಂಟಾಗುವಂತೆ ಸನ್ನಿವೇಶ ಉಂಟುಮಾಡುತ್ತಿದ್ದರು ಮತ್ತು ನನ್ನ ಮತ್ತು ಅರ್ಜಿದಾರಳ ಮಧ್ಯ ಜಗಳ ಆಗಬಾರದು ಎಂದರೆ ನನ್ನ ತಾಯಿಯನ್ನು ವೃದ್ದಾಶ್ರಮಕ್ಕೆ ಸೇರಿಸಬೇಕು ಎಂದು ಒತ್ತಾಯ ಮಾಡುತ್ತಿದ್ದರಿಂದ ನಾನು ಅರ್ಜಿದಾರಳಿಗೆ ಚೆನ್ನಾಗಿ ಇರೋಣ ಎಂದು ಎಷ್ಟು ಹೇಳಿದರೂ ನನ್ನ ಮಾತಿಗೆ ಗೌರವ ಕೊಟ್ಟಿರುವುದಿಲ್ಲ.

6. ನನ್ನ ಹೆಂಡತಿ ಅರ್ಜಿದಾರಳು ವಿವಾಹ ಮಾಡಿಕೊಂಡು ಒಂದು ತಿಂಗಳು ಅನ್ಯೊನ್ಯವಾಗಿದ್ದರು. ಅಮೇನೆ ಅವರ ವರ್ತನೆ ಚೆನ್ನಾಗಿ ಇಲ್ಲದೇ ಇರುವುದರಿಂದ ಅವರನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿರುತ್ತೇನೆ.

7. ನನಗೆ ಅರ್ಜಿದಾರಳು ತನಗೆ 30 ವರ್ಷ ಎಂದು ಹೇಳಿ ನನ್ನನ್ನು ವಿವಾಹ ಮಾಡಿಕೊಂಡು ನಂತರ ನನಗೆ ಗೊತ್ತಾಯಿತು ನನಗೆ ಅವರು ನನಕಿಂತ ನಾಲ್ಕು ವರ್ಷ ದೊಡ್ಡವರು ಎಂದು ಗೊತ್ತಾಗಿರುತ್ತದೆ.

8. ನಾನು ಅರ್ಜಿದಾರಳನ್ನು ದೇವರ ಮುಂದೆ ಕರೆದುಕೊಂಡು ಹೋಗಿ ನಿನ್ನ ವರ್ತವನೆ ಬಗ್ಗೆ ಪ್ರಮಾಣ ಮಾಡು ಎಂದು ಕೇಳಿದಾಗ ನನಗೆ ಹೇಳಲು ಆಗುವುದಿಲ್ಲ ನಾನು ಬರೆದು ಕೊಡುತ್ತೇನೆ ಎಂದು ಬರವಣಿಗೆಯಲ್ಲಿ ಅರ್ಜಿದಾರಳು ಅವರ ಸಂಬಂಧಿಕರೊಂದಿಗೆ ಸಂಬಂಧವನ್ನು ಇಟ್ಟುಕೊಂಡಿದ್ದು ಎರಡು ಬಾರಿ ಗರ್ಭಿಣಿಯಾಗಿರುತ್ತೇನೆ ಎಂದು ಬರೆದಿರುತ್ತಾರೆ.

9. ಮದುವೆ ಆಗಿ 1 ½ ತಿಂಗಳಿನಲ್ಲಿ ತಾನು ಗರ್ಭಿಬಿ ಆಗಿರುತ್ತೇನೆ ಎಂದು ನನಗೆ ನಮ್ಮ ಮೆನೆಯಲ್ಲಿ ಇರಲು ಆಗುವುದಿಲ್ಲ ಎಂದು ಹೇಳಿ ಬಟ್ಟೆ ಬರೆಗಳನ್ನು ತೆಗೆದುಕೊಂಡು ತನ್ನ ತವರು ಮನಗೆ ಹೋಗಿರುತ್ತಾರೆ.

10. ಒಂದು ವರ್ಷದ ವರೆಗೆ ನನಗೆ ಯಾವುದೇ ಕರೆಯನ್ನು ಮಾಡದೇ ನಾನು ಕರೆ ಮಾಡಿದರೆ ಯಾಕೇ ಕರೆ ಮಾಡುತ್ತೀಯಾ ಎಂದು ಕಟ್ಟು ಮಾಡಿ ನನಗೆ ಹಣ್ಣು ಮಗು ಜನಿಸಿದೆ ಎಂದು ಸಂದೇಶ ಹಾಕಿರುತ್ತಾರೆ.

11. ನಾನು ನನ್ನ ಹೆಂಡತಿ ಅರ್ಜಿದಾಳಿಗೆ ಕರೆ ಮಾಡಿದರೂ ಕರೆಯನ್ನು ಸ್ವಿಕರಿಸದೇ ನನ್ನ ಹೆಂಡತಿ ಮತ್ತು ಅವರ ತಾಯಿ ಕಟ್ಟು ಮಾಡುತ್ತಿದ್ದರು. ನಾನು ಮಗುವನ್ನು ನೋಡಲು ಹೋದಾಗ ಈ ಮಗು ನಿನ್ನದಲ್ಲ ಎಂದು ಹೇಳಿರುತ್ತಾರೆ.

12. 2 ½ ವರ್ಷಗಳ ನಂತರ ನ್ಯಾಯಾಲಯದಿಂದ ಒಂದು ಪ್ರಕರಣದ ಸಮನ್ಸ್ ಬಂದ ನಂತರ ನಾನು ನನ್ನ ಮಗಳನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ.

13. ನಾನು ಸದರಿ ಪ್ರಕರಣದಲ್ಲಿ ಹಾಜರಾಗಿ ಮಗುವನ್ನು ನೋಡಿ ಅರ್ಜಿದಾರಳನ್ನು ರಾಜಿ ಮಾಡಿಕೊಂಡು ನ್ಯಾಯಾಧೀಶರ ಉಪದೇಶದ ಮೇರೆಗೆ ಅರ್ಜಿದಾರಳು ಮತ್ತು ನನ್ನ ಮಗಳನ್ನು ಕರೆದುಕೊಂಡು ಮನೆಗೆ ಹೋಗಿರುತ್ತೇನೆ.

14. ನಾನು ನ್ಯಾಯಾಲಯದಿಂದ ಅರ್ಜಿದಾರಳು ಮತ್ತು ನನ್ನ ಮಗಳನ್ನು ಕರೆದುಕೊಂಡು 2 ½ ವರ್ಷಗಳ ವರೆಗೆ ಜೀವನವನ್ನು ನನ್ನ ಮಗುವಿನ ಮುಖವನ್ನು ನೋಡಿ ನಡೆಸಿರುತ್ತೇನೆ.

15. ಸದರಿ ಸಂಧರ್ಬದಲ್ಲಿ ಅರ್ಜಿದಾರಳು ನನಗೆ ಹಿಂಸೆ ಕೊಟ್ಟಿರುತ್ತಾರೆ. ಕೋವಿಡ್ 19 ರಲ್ಲಿ ನಾನು ಮನೆಯಿಂದ ಹೊರಗೆ ತಿರುಗಾಡಲು ಹೋದಾಗ 2021 ನೇ ಸಾಲಿನಲ್ಲಿ ಅರ್ಜಿದಾರಳು ನನ್ನ ಮಗಳನ್ನು ಕರೆದುಕೊಂಡು ಮನೆ ಬಿಟ್ಟು ನನ್ನನ್ನು ಹೇಳದೇ ಕೇಳದೆ ಹೋಗಿರುತ್ತಾರೆ. ನಾನು ಕರೆ ಮಾಡಿದರೂ ನನ್ನ ಕರೆ ಸ್ವಿಕರಿಸಿರುವುದಿಲ್ಲ.

16. 1 ವರ್ಷದ ನಂತರ ನನಗೆ ಈ ಪ್ರಕರಣದ ಸಮನ್ಸ್ ಬಂದಿರುತ್ತದೆ. ನಾನು ಅಡಿಗೆ ಮಾಡುವ ಗುತ್ತಿಗೆ ದಾರನ ಹತ್ತಿರ ಅಡಿಕೆ ಕೆಲಸ ಬಂದಾಗ ಮಾತ್ರ ಕೆಲಸ ಮಾಡಲು ಹೊಗುತ್ತೇನೆ.

17. ನಾನು ತಿಂಗಳಿನಲ್ಲಿ ಹೆಚ್ಚು ಕಡಿವೆ 7 ರಿಂದ 8 ಸಾವಿರ ಆದಯ ಸಂಪಾಧಿಸುತ್ತೇನೆ. ಅದರಲ್ಲಿ ನಾನು ನನ್ನ ತಾಯಿ ಮತ್ತು ನನ್ನ ಬಾಡಿಗೆ ಮನೆ ಮತ್ತು ನನ್ನ ವೆಚ್ಚವನ್ನು ನೋಡಿಕೊಳ್ಳಬೇಕಾಗುತ್ತದೆ.

18. ನಾನು ಅರ್ಜಿದಾರಳಿಂದ ಯಾವುದೇ ಆಭರಣಗಳನ್ನು ಪಡೆದುಕೊಂಡು ಬ್ಯಾಂಕಿನಲ್ಲಿ ಗಿರವಿ ಇಟ್ಟು ಹಣವನ್ನು ಪಡೆದಿರುವುದಿಲ್ಲ.

19. ನಾನು ಯಾವುದೇ ಸ್ವಂತ ಮನೆಯನ್ನು ಹೊಂದಿರುವುದಿಲ್ಲ.

<u>ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದಿ ಶ್ರೀ ವೈ.ಪಿ.ಎಂ ರವರಿಂದಃ</u>

ಅರ್ಜಿದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಾಯವಕಾಶ ಕೊರಿದ್ದು ಮೂಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.